C.C– 227/2018

ಪಿ. ಡಬ್ಲೂ – 2

ಸಾಕ್ಷಿಯನ್ನು ದಿಃ 11.02.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ.ಆರ್.ಹೆಚ್.ಎಸ್ ರವರಿಂದಃ–**

ಫಿರ್ಯಾದಿಯು ನನಗೆ ಸುಮಾರು 10 ವರ್ಷಗಳಿಂದ ಪರಿಚಯವಿದ್ದಾನೆ. ದಿನಾಂಕ 03.07.2015 ರಂದು ಯಾವ ವಾರ ಎಂದು ಈಗ ನನಗೆ ನೆನಪಿಲ್ಲ. ಆ ದಿನ ನ್ಯಾಯಾಲಯದ ಕಲಾಪಗಳು ನಡೆದಿದ್ದವು. ಆರೋಪಿತನು ಮತ್ತು ಫಿರ್ಯಾದುದಾರರು ಬಂದು ಪ್ರಾಮಿಸರಿ ನೋಟ್ ಅನ್ನು ಸಾಕ್ಷಿದಾರರ ಸಮಕ್ಷಮ ಬರೆದುಕೊಡಲು ನನಗೆ ಹೇಳಿದ್ದರಿಂದ ನಾನು ಬರೆದುಕೊಟ್ಟಿದ್ದೇನೆ. ನಿಪಿ–7 ರ ಸಾಕ್ಷಿದಾರರು ನನಗೆ ಪರಿಚಯಸ್ಥರಲ್ಲ. ಸದರಿ ಸಾಕ್ಷಿದಾರರನ್ನು ನಿಪಿ–7 ಅನ್ನು ಬರೆಯುವ ಕಾಲಕ್ಕೆ ನೋಡಿದ್ದೇನೆ. 10 ವರ್ಷಗಳು ಕಳೆದಿದ್ದರಿಂದ ಈಗ ಅವರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ನಿಪಿ–7 ರ ಸಾಕ್ಷಿದಾರರನ್ನು ಅದನ್ನು ಬರೆಯುವ ಕಾಲಕ್ಕೆ ಆರೋಪಿತನು ಮತ್ತು ಫಿರ್ಯಾದುದಾರರು ಗುರುತಿಸಿದರು. ನಿಪಿ–7 ಅನ್ನು ಬರೆಯುವಾಗ ಆರೋಪಿತನು ನನಗೆ ಪರಿಚಯಸ್ಥನಾಗಿರಲಿಲ್ಲ. ಮಧ್ಯಾಹ್ನ ಸುಮಾರು 04.00 ಗಂಟೆಗೆ ನಿಪಿ–7 ಅನ್ನು ಬರೆಯಿಸಲು ನನ್ನ ಬಳಿ ಬಂದಿದ್ದರು. ಸದರಿ ಪ್ರೋನೋಟ್ ಅನ್ನು ವಕೀಲರ ಭವನದ ಬಳಿ ನಾನು ಬರೆದುಕೊಟ್ಟಿದ್ದೇನೆ. ಸುಮಾರು 20 ನಿಮಿಷಗಳ ಕಾಲ ಫಿರ್ಯಾದಿ, ಆರೋಪಿತನು ಮತ್ತು ಸಾಕ್ಷಿದಾರರು ನನ್ನ ಬಳಿ ಇದ್ದರು. ನನ್ನ ಸಮಕ್ಷಮ ಸಾಲದ ಮಾತುಕತೆ ನಡೆದಿಲ್ಲ. ಪಕ್ಷಗಾರರು ಹೇಳಿದಂತೆ ನಾನು ನಿಪಿ–7 ಅನ್ನು ಬರೆದುಕೊಟ್ಟಿದ್ದೇನೆ. ಪ್ರೋನೋಟ್ ಅನ್ನು ಫಿರ್ಯಾದಿ ಮತ್ತು ಆರೋಪಿತನನ್ನು ಕೇಳಿ ಅವರು ನೀಡಿದ ಮಾಹಿತಿಯಂತೆ ನಾನು ಬರೆದಿದ್ದೇನೆ. ನನ್ನ ಸಮಕ್ಷಮ ಹಣ ಕೊಟ್ಟಿದ್ದು ಅಥವಾ ತೆಗೆದುಕೊಂಡಿದ್ದು ಮಾಡಿರುವುದಿಲ್ಲ. ಆರೋಪಿತನು ಮತ್ತು ಫಿರ್ಯಾದಿ ನಡುವೆ ಏನು ವ್ಯವಹಾರ ನಡೆದಿತ್ತು ಎಂದು ನಾನು ವಿಚಾರಣೆ ಮಾಡಿಲ್ಲ. ಆರೋಪಿತನನ್ನು ನಾನು ನ್ಯಾಯಾಲಯದಲ್ಲಿ ಈ ಪ್ರಕರಣದಲ್ಲಿ ಹಾಜರಾದಾಗ ಮೊದಲ ಬಾರಿಗೆ ನೋಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–7 ಅನ್ನು ನಾನು ಬರೆದುಕೊಟ್ಟಿಲ್ಲ ಹಾಗೂ ಆ ಸಂದರ್ಭದಲ್ಲಿ ಸಾಕ್ಷಿದಾರರು ಮತ್ತು ಆರೋಪಿತನು ನನ್ನ ಮುಂದೆ ಹಾಜರಾಗಿಲ್ಲ ಎನ್ನುವುದು ಸರಿಯಲ್ಲ.

ನಿಪಿ–7 ಅನ್ನು ಪಕ್ಷಗಾರರು ತಂದಿದ್ದರು. ಅದನ್ನು ನಾನು ಕೇವಲ ಬರೆದುಕೊಟ್ಟಿದ್ದೇನೆ. ನಿಪಿ–7 ಕ್ಕೆ ಮೊದಲು ಆರೋಪಿತನು ಸಹಿ ಮಾಡಿದನು. ಆನಂತರ ಸಾಕ್ಷಿದಾರರು, ನಂತರ

ಫಿರ್ಯಾದುದಾರರು ಸಹಿ ಮಾಡಿದರು. ನಾನು ಫಿರ್ಯಾದಿಗೆ ಅನೂಕೂಲವಾಗುವಂತೆ ಅವನ ಸಲಹೆ ಮೇರೆಗೆ ನಿಪಿ–7 ಅನ್ನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.